**ಇಂದು ದಿಃ21.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.**

ನನ್ನ ಮುಖ್ಯ ವಿಚಾರಣೆ ಬದಲಾಗಿ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿನ ವಿಚಾರಗಳೆಲ್ಲವೂ ಸತ್ಯವಾಗಿರುತ್ತವೆ ಮತ್ತು ಅದಕ್ಕೆ ನಾನೇ ಸಹಿ ಹಾಕಿರುತ್ತೇನೆ.

**ದಾಖಲಾತಿಯನ್ನು ಗುರುತಿಸುವ ಸಲುವಾಗಿ ಮುಂದುವರೆದ ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಿಂದಃ**

**Ex.P1-** Certified copy of FIR

**Ex.P2-** Certified copy of Complaint

**Ex.P3-** Certified copy of Spot mahazar

**Ex.P4-** Certified copy of IMV report

**Ex.P5-** Certified copy of charge sheet

**Ex.P6-** Medical bills (20 in numbers) for Rs.10,642/-

**Ex.P7-** X-ray films (4 in numbers)

**Ex.P8-** City-scan films (1 in number)

**Ex.P9-** Discharge summary

**ಪಾಟೀ ಸವಾಲುಃ 3 ನೇ ಎದುರುದಾರರ ಪರಃ ಶ್ರೀ.ಬಿ.ಜಿ.ಕೆ. ವಕೀಲರಿಂದಃ**

ಅಪಘಾತ ಆದ ಕೂಡಲೇ ಪಿರಿಯಾಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೇನೆ. ನನಗೆ ಯಾವ ರೀತಿ ಗಾಯಗಳು ಆಯಿತು ಅಂತ ಸದರಿ ಆಸ್ಪತ್ರೆಯಲ್ಲಿ ಬರೆದುಕೊಂಡಿದ್ದಾರೆ. ನಾನು ಪೂರ್ತಿ ರಸ್ತೆ ಸೈಡ್ ನಲ್ಲಿ ನಿಂತಿದ್ದೆ ಆಗ ಅಪಘಾತ ಆಗಿದೆ. ಆ ರಸ್ತೆಯ ಪಕ್ಕದಲ್ಲಿ ಫುಟ್ ಪಾತ್ ಇರುವುದಿಲ್ಲ. ಮೈಸೂರು-ಮಡಿಕೇರಿ ರಾಷ್ಟ್ರಿಯ ಹೆದ್ದಾರಿಯಲ್ಲಿ ಅಪಘಾತ ಆಗಿದೆ ಎಂದರೆ ಸರಿ. ರಸ್ತೆ ದಾಟ್ಟುತ್ತಿದ್ದಾಗ ಅಪಘಾತ ಆಗಿದೆ ಎಂದರೆ ಸರಿಯಲ್ಲ. ರಸ್ತೆ ದಾಟಲು ನಿಂತಿದ್ದಾಗ ಅಪಘಾತ ಆಗಿದೆ. ನಾನು ನಿಂತಿದ್ದ ರಸ್ತೆಯಲ್ಲಿ ಟ್ರಾಫಿಕ್ ಸಿಗ್ನಲ್ ಅಥವಾ ಜೀಬ್ರಾ ಕ್ರಾಸಿಂಗ್ ಇರಲಿಲ್ಲ. ರಸ್ತೆ ದಾಟಲು ನಿರ್ಲಕ್ಷತೆಯಿಂದ ನಿಂತಿದ್ದ ಕಾರಣ ನನ್ನ ತಪ್ಪಿನಿಂದಲೆ ಅಪಘಾತ ಆಗಿದೆ ಎಂದರೆ ಸರಿಯಲ್ಲ. ನಾನು ನಿಂತಿದ್ದ ಸ್ಥಳದಿಂದ ಸ್ವಲ್ಪ ಮುಂದೆ ಹೋದರೆ ಅಲ್ಲಿ ಟ್ರಾಫಿಕ್ ಸಿಗ್ನಲ್ ಇತ್ತು. ಸದರಿ ಟ್ರಾಫಿಕ್ ಸಿಗ್ನಲ್ ಬಳಿ ರಸ್ತೆ ದಾಟಲು ತೊಂದರೆ ಇರಲಿಲ್ಲ ಎಂದರೆ ಸರಿ. ನನ್ನ ತಪ್ಪಿನಿಂದಲೆ ಅಪಘಾತ ಆಗಿರುವುದರಿಂದ ನಾನು ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

ನನ್ನ ಸ್ವಂತ ಜಮೀನಿನಲ್ಲಿ ವ್ಯವಸಾಯ ಮಾಡುತ್ತೇನೆ. ಈಗ ನನಗೆ ಏನು ಮಾಡಲು ಸಾಧ್ಯವಾಗುತ್ತಿಲ್ಲ. ಅಪಘಾತ ಪಡಿಸಿದ ವ್ಯಕ್ತಿ ಹೆಸರು ಮರೆತು ಹೋಗಿದೆ. ಅಪಘಾತ ಪಡಿಸಿದ ವಾಹನವು ಶಾರದಮ್ಮ ಎಂಬುವವರ ಹೆಸರಿನಲ್ಲಿ ಇದೆ. ಅವರ ಹೆಸರಿನಲ್ಲಿ ಇರುವ ವಾಹನ ನನಗೆ ಅಪಘಾತ ಪಡಿಸಿರುವುದಾಗಿ ನನ್ನ ಅಣ್ಣನ ಮಗ ರಮೇಶ ಹೇಳಿದ್ದಾನೆ. ಆ ವಾಹನ ಶಾರದಮ್ಮ ರವರಿಗೆ ಸೇರಿದ್ದ ಬಗ್ಗೆ ನನಗೆ ಕೂಡ ವಯಕ್ತಿಕವಾಗಿ ಗೊತ್ತಿದೆ. ಅಪಘಾತದ ಬಗ್ಗೆ ನನ್ನ ಅಣ್ಣನ ಮಗ ರಮೇಶ ದೂರು ಕೊಟ್ಟಿದ್ದಾನೆ. 1 ನೇ ಎದುರುದಾರರ ವಾಹನ ನನಗೆ ಅಪಘಾತ ಪಡಿಸಿಲ್ಲ ಆದರೆ ಪರಿಹಾರ ಪಡೆಯುವ ಉದ್ದೇಶದಿಂದ 1 ನೇ ಎದುರುದಾರರೊಡನೇ ಸೇರಿ ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರರ ವಾಹನವನ್ನು ಅಪಘಾತದಲ್ಲಿ ಸೇರಿಸುವ ಸಲುವಾಗಿ 3 ದಿನ ತಡವಾಗಿ ಪೋಲಿಸ್ ಠಾಣೆಗೆ ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಂತರ ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ 15-20 ದಿವಸ ಚಿಕಿತ್ಸೆ ಪಡೆದಿದ್ದೇನೆ. ನನಗೆ ಚಿಕಿತ್ಸೆ ನೀಡಿರುವ ವೈದ್ಯರ ಹೆಸರು ಗೊತ್ತಿಲ್ಲ. ಹೀಗೆ ಸುಮಾರು 6 ತಿಂಗಳ ಹಿಂದೆ ಕೊನೆಯ ಬಾರಿ ಆಸ್ಪತ್ರೆಗೆ ಹೋಗಿದ್ದೇನೆ. ಮೊದಲಿನಂತೆ ಈಗಲೂ ಸಹಾ ಕೆಲಸ ಮಾಡುತ್ತಿದ್ದೇನೆ ಆದರೆ ಪರಿಹಾರ ಸಿಗಲಿ ಎನ್ನುವ ಉದ್ದೇಶದಿಂದ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಿಗೊಸ್ಕರ ಮೆಡಿಕಲ್ ಬಿಲ್ಲುಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಆಧಾರ್ ಕಾರ್ಡ್ ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇರುವುದಿಲ್ಲ. ಅದರ ಪ್ರಕಾರ ನನ್ನ ಜನ್ಮ ದಿನಾಂಕ 01-01-1976. ಅಪಘಾತ ಪಡಿಸಿದ ಚಾಲಕನಿಗೆ ಚಾಲನ ಪರವಾನಗಿ ಇಲದಿರುವ ಕಾರಣ 3 ನೇ ಎದುರುದಾರರು ನನಗೆ ಪರಿಹಾರ ಕೊಡಲು ಭಾದ್ಯರಲ್ಲ ಎಂದರೆ ಗೊತ್ತಿಲ್ಲ. ನಾನು ಮತ್ತು ನನ್ನ ಅಣ್ಣನ ಮಗ ಸೇರಿ ಕೇಸು ಸೃಷ್ಟಿ ಮಾಡಿರುವುದರಿಂದ ನಾನು ಪರಿಹಾರ ಪಡೆಯಲು ಭಾದ್ಯರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***
**ಪಿರಿಯಾಪಟ್ಟಣ**